
# ಭಕ್ತ ಕನಕದಾಸರು – ೨

**ಕಥೆ : ಟಿ.ಎಂ. ಸುಂದರರಾಮನ್** **ಚಿತ್ರ: ಶಂಕರ್**


16 ಅಂದು ವ್ಯಾಸರಾಯರು ದೇವರ ಮೂರ್ತಿಯನ್ನು ಪೂಜಿಸಿ, ಮಾನಸಪೂಜೆ ಮಾಡಿದರು. ಅವರು ತಮ್ಮ ಹೃದಯದಲ್ಲಿ ಮಹಾವಿಷ್ಣುವನ್ನು ಆವಾಹನೆ ಮಾಡಿ, ಅವನಿಗೆ ವಜ್ರದ ಕಿರೀಟವನ್ನು ಅರ್ಪಿಸಿದರು. ಅನಂತರ ಅವರು ಹಾರದಿಂದ ದೇವರನ್ನು ಅಲಂಕರಿಸಲು ಪ್ರಯತ್ನಿಸಿದರು. ಆದರೆ ಕಿರೀಟ ದೊಡ್ಡದಾಗಿತ್ತು; ಆದ್ದರಿಂದ ಹಾರವನ್ನು ಹಾಕಲಾಗಲಿಲ್ಲ.

17 ಗುರುಗಳಿಗೆ ಹಾರವನ್ನು ಹಾಕಿ ಸಿಂಗರಿಸುವಲ್ಲಿ ಉಂಟಾದ ತೊಂದರೆ ಕನಕನಿಗೆ ಅರ್ಥವಾಯಿತು.





ಈ ಘಟನೆಯ ನಂತರವೂ ಉಳಿದ ಶಿಷ್ಯಂದಿರಿಗೆ ಕನಕನ ಮೇಲೆ ಪ್ರೀತಿ, ವಿಶ್ವಾಸ, ಗೌರವಗಳು ಉಂಟಾಗಲಿಲ್ಲ.

19 ಕೆಲವು ವರ್ಷಗಳು ಕಳೆದವು. ಕನಕದಾಸನ ಹಿರಿಮೆಯನ್ನು ಇತರರಿಗೂ ಮನವರಿಕೆ ಮಾಡಬೇಕೆಂದು ಗುರುಗಳು ಪ್ರಯತ್ನಪಟ್ಟರು.





18 ಒಂದು ದಿನ ಕೆಲವು ಮಂದಿ ಶಿಷ್ಯಂದಿರು ಒಂದು ಹೆಂಡದ ಮಡಕೆಯಲ್ಲಿ ಮೀನನ್ನು ತುಂಬಿಸಿ, ಕನಕನಿಗೆ ತಿಳಿಯದಂತೆ ಅವನ ಕೈಚೀಲದಲ್ಲಿ ಅಡಗಿಸಿಟ್ಟರು. ಬಳಿಕ ...




ಕೈಚೀಲದಲ್ಲೇನೋ ಮಡಕೆಯಿತ್ತು. ಆದರೆ ಅದರಲ್ಲಿ ಜೇನು ಹಾಗು ತಾವರೆ ಹೂವುಗಳಿದ್ದವು. ಗುರುಗಳು ನಸುನಕ್ಕರು. ಶಿಷ್ಯಂದಿರು ಚಿಂತೆಗೀಡಾದರು.

20 ಮರುದಿನ ವ್ಯಾಸರಾಯರು ಕನಕ, ಶಿಷ್ಯಂದಿರು ಹಾಗೂ, ಊರಿನ ಜನರೊಂದಿಗೆ ಆ ಸ್ಥಳದಲ್ಲಿ ಕಾಯುತ್ತ ಕುಳಿತಿದ್ದರು. ಅಷ್ಟರಲ್ಲಿ ಒಂದು ನಾಯಿ ವೇಗವಾಗಿ ಓಡುತ್ತ ಬಂತು.




ಅಷ್ಟರಲ್ಲಿ ಊರಿನ ಜನರು ಆ ನಾಯಿಯನ್ನು ಓಡಿಸಿಯೇಬಿಟ್ಟಿದ್ದರು.

ದಾಯವು 'ಪುಷ್ಟಿಮಾರ್ಗ' ಅಥವಾ ಭಗವತ್ಕೃಪೆಯ ಮಾರ್ಗ ಎಂದು ಹೆಸರಾಯಿತು. ಈ ಪುಣ್ಯ ವ್ರಜಭೂಮಿಯಲ್ಲಿ ಬಹಳ ಕಾಲದವರೆಗೂ ವಾಸಮಾಡಿದ ನಂತರ, ವಲ್ಲಭರು ಮತ್ತೂ ಉತ್ತರ ದಿಕ್ಕಿಗೆ ಹೊರಟು, ಕುರುಕ್ಷೇತ್ರಕ್ಕೆ ಹೋದರು. ತದನಂತರ, ಹಿಮಾಲಯದ ತೀರ್ಥಕ್ಷೇತ್ರಗಳಾದ ಹರಿದ್ವಾರ, ಋಷೀಕೇಶ, ಗಂಗೋತ್ರಿ ಮತ್ತು ಕೇದಾರಗಳಿಗೆ ಭೇಟಿಕೊಟ್ಟರು. ಹಿಮಾಲಯದ ಯಾತ್ರೆಯನ್ನು ಮುಗಿಸಿ, ಇನ್ನೂ ಪೂರ್ವದಿಕ್ಕಿಗೆ ಪ್ರಯಾಣ ಬೆಳೆಸಿ, ಪ್ರಯಾಗ, ಗಯಾ, ಕಾಶಿ ಮತ್ತು ಗಂಗಾಸಾಗರಗಳ ದರ್ಶನ ಮಾಡಿದರು. ಅಲ್ಲಿಂದ ಅವರು ಜಗನ್ನಾಥ ಪುರೀಧಾಮಕ್ಕೆ ಬಂದರು. ಕಡೆಯದಾಗಿ, ಅಗ್ರಹಾರಕ್ಕೆ ಬಂದರು. ಅಲ್ಲಿ ಅವರ ತಾಯಿ ವಾಸಿಸುತ್ತಿದ್ದರು. ಕಾಲ್ನಡಿಗೆಯಲ್ಲಿಯೇ ಭಾರತದಾದ್ಯಂತ ಒಂಭತ್ತು ವರ್ಷಗಳ ಕಾಲ ಅವರು ಕೈಕೊಂಡ ಮೊದಲ ತೀರ್ಥ ಯಾತ್ರೆಯು ಹೀಗೆ ಸುಸಂಪನ್ನಗೊಂಡಿತು.

### ಎರಡನೆಯ ತೀರ್ಥಯಾತ್ರೆ

ವಲ್ಲಭರು ತಮ್ಮ ತಾಯಿಯ ಜೊತೆಗೆ ಒಂದು ವರ್ಷ ಕಾಲ ನೆಲೆಸಿದ್ದರು. ನಂತರ, ತಮ್ಮ ದ್ವಿತೀಯ ತೀರ್ಥಯಾತ್ರೆಯನ್ನು ಆರಂಭಿಸಿದರು. ಮತ್ತೊಮ್ಮೆ ವಿಜಯನಗರಕ್ಕೆ ಭೇಟಿಕೊಟ್ಟರು. ಅನಂತರ ಪಂಡರಾಪುರಕ್ಕೆ ಬಂದರು. ಅಲ್ಲಿ ಶ್ರೀಕೃಷ್ಣನನ್ನು ವಿಠ್ಠಲ ಅಥವಾ ವಿಠೋಬನಾಥ ಎಂಬ ಹೆಸರಿನಿಂದ ಪೂಜಿಸುತ್ತಾರೆ. ಅಲ್ಲದೆ ರುಕ್ಮಿಣಿ ಕೂಡ ಇಲ್ಲಿ ಪೂಜಿಸಲ್ಪಡುತ್ತಾಳೆ. ಪಂಡರಾ ಪುರದಲ್ಲಿನ ವಾಸ್ತವ್ಯವು ಅವರ ಜೀವನದಲ್ಲಿ ಮಹತ್ವದ ಪರಿ ವರ್ತನೆಯನ್ನು ಉಂಟುಮಾಡಿತು. ಇಲ್ಲಿಯೇ ಅವರು ಮದುವೆ ಯಾಗುವಂತೆ ಭಗವಂತನ ಆಣತಿಯನ್ನು ಪಡೆದುಕೊಂಡರು. ಇದುವರೆಗೂ, ವಲ್ಲಭರು ಬ್ರಹ್ಮಚಾರಿಯಾಗಿಯೇ ತೀರ್ಥಯಾತ್ರೆ ಯನ್ನು ಮಾಡುತ್ತಿದ್ದರೇ ಹೊರತು, ಸಂನ್ಯಾಸ ದೀಕ್ಷೆಯನ್ನು ಸ್ವೀಕರಿ ಸಿರಲಿಲ್ಲ. ಮದುವೆಯಾಗಿ ಗೃಹಸ್ಥ ಜೀವನವನ್ನು ನಡೆಸಬೇಕೆಂಬ ಯೋಚನೆ ಅವರಿಗೆ ಇತ್ತೋ ಅಲ್ಲವೋ ಎನ್ನುವುದು ತಿಳಿದು ಬಂದಿಲ್ಲ. ಆದರೆ ಭಗವಂತನ ಈ ಆಜ್ಞೆಯು ಅವರ ಜೀವನದಲ್ಲಿ ಒಂದು ಹೊಸ ತಿರುವನ್ನು ನೀಡಿದ್ದಂತೂ ಸತ್ಯ. ಅದಲ್ಲದೆ, ಅವರು ಆರಂಭಿಸಿದ ಭಕ್ತಿ ಆಂದೋಲನಕ್ಕೆ ಭಗವಂತನ ಪ್ರೇರಣೆಯೂ ಸಿಕ್ಕಿದ ಹಾಗಾಯಿತು. ಗೃಹಸ್ಥ ಜೀವನವು ಭಕ್ತಿತತ್ತ್ವದಲ್ಲಿ ಒಲವುಳ್ಳ ಉಳಿದ ವೇದಾಂತ ಆಚಾರ್ಯರ ನಡುವೆ ಒಂದು ವಿಶಿಷ್ಟ ಸ್ಥಾನ ವನ್ನು ವಲ್ಲಭರಿಗೆ ದೊರಕಿಸಿಕೊಟ್ಟಿತು. ಏಕೆಂದರೆ, ಉಳಿದೆಲ್ಲ ಆಚಾ ರ್ಯರು ಸಂನ್ಯಾಸಿಗಳಾಗಿದ್ದರು, ವಲ್ಲಭರು ಮಾತ್ರವೇ ಗೃಹಸ್ಥರು.

ವಲ್ಲಭರು ಗುಜರಾತ್ ರಾಜ್ಯಕ್ಕೆ ಹೋದರು. ಅನಂತರ ವ್ರಜ ಭೂಮಿಗೆ ಭೇಟಿಕೊಟ್ಟರು. ಇದಾದ ಮೇಲೆ ಬದರೀನಾಥ ಮುಂತಾದ ಹಿಮಾಲಯದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ದರು. ಕೊನೆಗೆ ಅವರು ವಾರಾಣಸಿಗೆ ಬಂದಾಗ ಅವರಿಗೆ ಒಂದು ದೊಡ್ಡ ಆಶ್ಚರ್ಯ ಕಾದಿತ್ತು. ದೇವದತ್ತನೆಂಬ ಬ್ರಾಹ್ಮಣನು ಅವ ರೆಡೆಗೆ ಬಂದನು. ತಮ್ಮ ಮಗಳಾದ ಮಹಾಲಕ್ಷ್ಮಿಯನ್ನು ಮದುವೆ ಯಾಗುವಂತೆ ಕೇಳಿಕೊಂಡನು. ವಲ್ಲಭರ ತಾಯಿಯ ಅನು ಮತಿಯ ಮೇರೆಗೆ ೧೫೦೦ರಲ್ಲಿ ವಿವಾಹ ನಡೆಯಿತು. ಕೆಲ ಕಾಲದ ನಂತರ ಗೋಕುಲನಾಥ ಮತ್ತು ವಿಠ್ಠಲನಾಥ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಅವರಲ್ಲಿ ವಿಠ್ಠಲನಾಥನು ಅತ್ಯಂತ ಮೇಧಾವಿ ಯಾಗಿದ್ದನು. ತನ್ನ ತಂದೆಯು ಆರಂಭಿಸಿದ್ದ ಧಾರ್ಮಿಕ ಸಂಪ್ರ ದಾಯವನ್ನು ಕ್ರೋಢೀಕರಿಸುವುದರಲ್ಲಿ ಮತ್ತು ಸಶಕ್ತಗೊಳಿಸುವು ದರಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದನು.

೧೫೦೦-೩೭ರವರೆಗಿನ ಅವಧಿಯಲ್ಲಿ ವಲ್ಲಭರು ಗೋಕುಲ ದಲ್ಲಿಯೇ ವಾಸ್ತವ್ಯ ಹೂಡಿದರು. **ಪುಷ್ಟಿಮಾರ್ಗ**ವೆಂಬ ನೂತನ ಧಾರ್ಮಿಕ ಪಂಥವನ್ನು ಹುಟ್ಟುಹಾಕುವಂತೆ ಅವರು ಅಲ್ಲಿಯೇ ಭಗವತ್ಪ್ರೇರಣೆಯನ್ನು ಪಡೆದುಕೊಂಡರು. ಕಲಿಯುಗದಲ್ಲಿ ಮಾನವ ನಿಗೆ ಆಧ್ಯಾತ್ಮಿಕ ಸಾಧನೆಗಳನ್ನು ಮಾಡುವ ಶಕ್ತಿಯು ಇರುವುದಿಲ್ಲ; ಹೀಗಾಗಿ ಭಗವಂತನು ತನ್ನ ಅಪಾರ ಕೃಪೆಯಿಂದ ಉದ್ಧಾರ ಮಾಡದೆಯೇ ಅವನಿಗೆ ಮೋಕ್ಷವನ್ನು ಹೊಂದುವ ಬೇರೆ ಯಾವ ದಾರಿಯೂ ಇರುವುದಿಲ್ಲ. ಆದರೆ ಭಗವಂತನ ಕೃಪೆಗೆ ಪಾತ್ರನಾಗ ಬೇಕಾದರೆ, ಸಾಧಕನು ಭಗವಂತನ ಕೃಪಾವಲಯಕ್ಕೆ ಸೇರಿದವ ನಾಗಬೇಕು. ಅದಕ್ಕಾಗಿ ಭಗವಂತನ ಇಚ್ಛಾಶಕ್ತಿಗೆ ಶರಣಾಗಿ, ಆತನ ಕೃಪೆಗೆ ಯೋಗ್ಯನಾಗಬೇಕು. ಈ ಮಾರ್ಗವನ್ನೇ ಭಗವಂತನು ವಲ್ಲಭರ ಮೂಲಕ ಮಾನವನಿಗೆ ಅನಾವರಣಗೊಳಿಸಿದನು ಎಂದು ಶ್ರದ್ಧಾಳುಗಳು ನಂಬುತ್ತಾರೆ. ತಮ್ಮನ್ನು ಭಗವಂತನು ತನ್ನ ಮುಖವಾಣಿಯನ್ನಾಗಿ ಮಾಡಿಕೊಂಡಿದ್ದಾನೆ ಎಂದು ವಲ್ಲಭರ ಅರಿವಿಗೆ ಬಂದಿತು. ಭಗವಂತ ಮತ್ತು ಮನುಷ್ಯನ ನಡುವೆ ಸ್ಥಾಪಿತವಾಗಿರುವ ಈ ಬಗೆಯ ಸಂಬಂಧಕ್ಕೆ **ಬ್ರಹ್ಮಸಂಬಂಧ** ಎಂಬ ನೂತನ ನಾಮಧೇಯವನ್ನು ವಲ್ಲಭರು ನೀಡಿದರು. ವಲ್ಲಭರು ಹತ್ತುಹಲವು ಮಹಾನ್ ಆಚಾರ್ಯರ ಪ್ರಭಾವಕ್ಕೆ ಒಳಪಟ್ಟಿ ದ್ದೇನೋ ನಿಜವೇ, ಆದರೆ ಅವರಲ್ಲಿ ಯಾರನ್ನೂ ಅವರು ಗುರು ವೆಂದು ಸ್ವೀಕರಿಸಿರಲಿಲ್ಲ. ಹೀಗಾಗಿ ವಲ್ಲಭಾಚಾರ್ಯರ ಸಂಪ್ರ ದಾಯವು ಸಂಪೂರ್ಣವಾಗಿ ಒಂದು ನೂತನ ಪಂಥವೇ ಆಗಿದೆ; ಅವರಿಂದಲೇ ಪ್ರವರ್ತನಗೊಂಡ ಆಧ್ಯಾತ್ಮಿಕ ಪರಂಪರೆಯಾಗಿದೆ. ಇದರ ಹಿನ್ನೆಲೆಯಲ್ಲಿ ಆಗಿನ ಕಾಲದಲ್ಲಿ ಪ್ರಚುರವಾಗಿದ್ದ ವೈಷ್ಣವ ಧರ್ಮ ಮತ್ತು ವೇದಾಂತ ಸಿದ್ಧಾಂತವಿರುವುದೇನೋ ನಿಜವೇ. ಆದರೂ ಈ ಪಂಥಕ್ಕೆ ವಲ್ಲಭರೇ ಸ್ಥಾಪಕರು ಎನ್ನುವುದಂತೂ ನಿರ್ವಿವಾದ. ಇದರ ಮೊದಲ ಅನುಯಾಯಿಯಾಗಿ ಪರಿವರ್ತನೆ ಹೊಂದಿದವನೆಂದರೆ ದಾಮೋದರ ದಾಸ ಎನ್ನುವವನು. ಅವನು ವಲ್ಲಭರೊಡನೆ ಅವರ ಎಲ್ಲ ತೀರ್ಥಯಾತ್ರೆಗಳಲ್ಲಿಯೂ ಸತತ ಸಂಗಾತಿಯಾಗಿದ್ದನು. 'ಶ್ರೀಕೃಷ್ಣ ಶರಣಂ ಮಮ' ಎನ್ನುವ ಮಂತ್ರದೊಡನೆ ಅವನ ದೀಕ್ಷೆಯು ನಡೆಯಿತು. ಇತರ ಅರ್ಥ, 'ಶ್ರೀಕೃಷ್ಣನಲ್ಲಿಯೇ ನಾನು ಶರಣುಹೊಂದಿದ್ದೇನೆ' ಎಂದು.

*(ಮುಂದುವರಿಯುವುದು)*

ಹೀಗಿವೆ: ಪಂಪಾ, ಋಷ್ಯಮೂಕ, ಕುಮಾರಪಾದ, ಶ್ರೀಶೈಲ, ತಿರುಪತಿ, ಕಾಂಚೀಪುರಂ, ಕುಂಭಕೋಣಂ, ಮನ್ನಾರ್‌ಗುಡಿ, ಶ್ರೀರಂಗಮ್, ಮದುರೈ, ತೆಂಕಾಸಿ, ರಾಮೇಶ್ವರಂ, ಶ್ರೀ ವೈಕುಂಠಮ್, ಆಳ್ವಾರ್ ತಿರುನಗರಿ, ತಿರುವನಂತಪುರಂ, ಜನಾರ್ದನಮ್, ಉಡುಪಿ, ಶ್ರೀರಂಗಪಟ್ಟಣಂ ಮತ್ತು ಗೋಕರ್ಣ.

ವಲ್ಲಭರು ಕೌಂಡಿನ್ಯಾಶ್ರಮದಲ್ಲಿ ಇದ್ದಾಗ ಒಂದು ಅಪೂರ್ವ ಅನುಭವವನ್ನು ಪಡೆದುಕೊಂಡರು. ಈ ಸ್ಥಳವು ಪೂರ್ವಘಟ್ಟದ ಗಹನವಾದ ಅರಣ್ಯಪ್ರದೇಶದಲ್ಲಿದೆ. ಇಲ್ಲಿ ಗಂಧದ ಮರಗಳು ದಟ್ಟವಾಗಿ ಬೆಳೆದುಕೊಂಡಿವೆ. ಇಲ್ಲಿ ಋಷಿ ಕೌಂಡಿನ್ಯರು ವಿಷ್ಣುಸ್ವಾಮಿಗೆ ಭಗವದ್ದರ್ಶನವನ್ನು ಅನುಗ್ರಹಿಸಿದರು ಎಂದು ಐತಿಹ್ಯ ಇದೆ. ವಿಷ್ಣುಸ್ವಾಮಿಗಳು ವಲ್ಲಭರಿಗಿಂತ ಮುಂಚೆಯೇ ಬಾಳಿದ ಮಹಾನ್ ವೈಷ್ಣವ ಆಚಾರ್ಯರಲ್ಲಿ ಒಬ್ಬರು. ವಲ್ಲಭರು ಕೌಂಡಿನ್ಯಾಶ್ರಮದಲ್ಲಿ ಇದ್ದಾಗ, ಋಷಿ ಕೌಂಡಿನ್ಯರೇ ಅವರಿಗೆ ದರ್ಶನವಿತ್ತು ಹೀಗೆ ಹೇಳಿದರು: ನಮ್ಮ ಗುರುಗಳಾಗಿದ್ದವರು ಶಾಂಡಿಲ್ಯ ಋಷಿಗಳು. ಅವರು ಗೋವರ್ಧನ ಪರ್ವತದಲ್ಲಿ ಬಹಳಕಾಲ ತಪಸ್ಸು ಮಾಡಿದರು. ಭಗವಂತನ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ಕಟ್ಟಕಡೆಯಲ್ಲಿ ಅವರಿಗೆ ತಮ್ಮ ತಪಸ್ಸಿನ ಫಲ ದೊರಕಿತು. ಭಗವಂತನು ಅವರ ಮೇಲೆ ಸುಪ್ರೀತನಾದನು. ಇದರ ಕಾರಣವಾಗಿ, ಲಲಿತಾದೇವಿ ಎಂಬ ತಾಪಸಿ ಮಹಿಳೆ ಅವರ ಮುಂದೆ ಕಾಣಿಸಿಕೊಂಡಳು. ಆಕೆಯು ಭಕ್ತಿ ಸಾಧನೆಯ ದೀಕ್ಷೆಯನ್ನು ಶಾಂಡಿಲ್ಯರಿಗೆ ನೀಡಿದಳು. ಅಲ್ಲದೆ ಭಕ್ತಿಯ ಉಪದೇಶವನ್ನೂ ಹೀಗೆ ಮಾಡಿದಳು: ''ಶ್ರೀ ಪುರುಷೋತ್ತಮನಿಗಿಂತ ಶ್ರೇಷ್ಠನಾದವನು ಬೇರೆ ಯಾರೂ ಇಲ್ಲ. ವೇದಗಳು ಮತ್ತು ದೇವತೆಗಳೂ ಕೂಡ ಅವನನ್ನು ಸಂಪೂರ್ಣವಾಗಿ ತಿಳಿದುಕೊಂಡಿಲ್ಲ. ಭಕ್ತನಾದವನು ಅವನಲ್ಲಿ ಸಂಪೂರ್ಣವಾದ ಮತ್ತು ಆಳವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು. ಅಂಥ ಶ್ರದ್ಧೆಯನ್ನು ಬೇರೆ ಯಾವುದರಲ್ಲಿಯೂ ತೋರಿಸಬಾರದು. ಎಲ್ಲ ಬಗೆಯ ಜಡತೆಯನ್ನು ಬಿಟ್ಟು ಭಗವಂತನ ಲೀಲೆಗಳನ್ನು ಪ್ರತಿಕ್ಷಣವೂ ಸ್ಮರಿಸಿಕೊಳ್ಳಬೇಕು. ನೀನು ಸರ್ವದಾ ನಿನಗೆ ನೀನೇ ಹೇಳಿಕೊಳ್ಳ ಬೇಕು, 'ನಾನು ಭಗವಂತನ ಸೇವಕನಾಗಿದ್ದೇನೆ. ಅವನೊಬ್ಬನೇ ನನ್ನ ಒಡೆಯ. ವೇದಗಳಾಗಲಿ ಅಥವಾ ಯಾವುದೇ ಮನುಷ್ಯ ನಿರ್ಮಿತ ಸಾಧನಗಳಾಗಲಿ ನನ್ನ ಆಧ್ಯಾತ್ಮಿಕ ಮಾರ್ಗದಲ್ಲಿ ಅಡ್ಡಿಗಳಾಗುವುದಿಲ್ಲ. ಜಗತ್ತಿನ ಸುಖವೆಲ್ಲವೂ ಕಡೆಯದಾಗಿ ದುಃಖದಲ್ಲಿಯೇ ಕೊನೆಗೊಳ್ಳುತ್ತವೆ. ಹೀಗಾಗಿ ಇಂಥ ಸುಖದಲ್ಲಿ ಯಾವುದೇ ಒಳಿತಿಲ್ಲ. ಎಂದು ತಾನೇ ನಾನು ಭಗವಂತನನ್ನು ಕಾಣಬಲ್ಲೆ? ಎಂದು ತಾನೇ ಭಗವಂತನು ನನ್ನ ಮೇಲೆ ತನ್ನ ಕೃಪೆಯನ್ನು ಹರಿಸುತ್ತಾನೆ? ಎಲ್ಲರ ಅಹಂಕಾರವನ್ನೂ ಮರ್ದಿಸುವ ಆ ಪರಮಪುರುಷನ ವದನಾರವಿಂದವನ್ನು ಎಂದು ತಾನೇ ನಾನು ಕಾಣುತ್ತೇನೆ?' ಹೀಗೆ ನೀನು ಭಾವಿಸುತ್ತ ಹೋದರೆ, ಕಡೆಯಲ್ಲಿ ಭಗವಂತನ ಪರಮಾದ್ಭುತ ಲೀಲೆಯ ಅನುಭೂತಿಯನ್ನು ಪಡೆದುಕೊಳ್ಳುತ್ತೀಯೆ.'' ಹೀಗೆ ಶಾಂಡಿಲ್ಯನಿಗೆ ಉಪದೇಶಿಸಿ, ಲಲಿತಾದೇವಿಯು ಕಣ್ಮರೆಯಾದಳು. ಶಾಂಡಿಲ್ಯ ಋಷಿ ಆಕೆ ಉಪದೇಶಿಸಿದ ರೀತಿಯಲ್ಲಿ ಭಕ್ತಿಸಾಧನೆಯನ್ನು ಕೈಗೊಂಡನು. ಇದರ ಫಲವಾಗಿ ಕಟ್ಟಕಡೆಗೆ ಅವನು ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡನು. ಶಾಂಡಿಲ್ಯ ಋಷಿಯು ಭಕ್ತಿಸಾಧನೆಯ ಅಧಿಕೃತ ಬೋಧಕನಾಗಿದ್ದಾನೆ. ಅವನ ಗ್ರಂಥವಾದ **ಶಾಂಡಿಲ್ಯ ಭಕ್ತಿ ಸೂತ್ರ**ವು ಭಕ್ತಿಸಾಧನೆಯ ಕ್ಷೇತ್ರದಲ್ಲಿ ಅಧಿಕೃತ ಪುಸ್ತಕವೆಂದು ಪ್ರಸಿದ್ಧವಾಗಿದೆ.

ವಲ್ಲಭರ ವಿಸ್ತರಿಸಿದ ಈ ತೀರ್ಥಯಾತ್ರೆಯು ಬಹಳಕಾಲದವರೆಗೆ ನಡೆಯಿತು. ಈ ಅವಧಿಯಲ್ಲಿ ಪ್ರಮುಖ ವಾಗಿ ಅವರು ರಾಮಾನುಜರ ಶ್ರೀವೈಷ್ಣವ ಮತ ಮತ್ತು ಶ್ರೀ ಮಧ್ವರ ದ್ವೈತ ಸಂಪ್ರದಾಯಗಳಿಗೆ ಸೇರಿದ ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮ ಕಾಲವನ್ನು ಕಳೆದರು. ಇದರಿಂದ ವಲ್ಲಭರಿಗೆ ಆ ಸಿದ್ಧಾಂತಗಳ ಸಂತ ಮಹಾತ್ಮರನ್ನು ದರ್ಶಿಸುವ ಮತ್ತು ಅವರ ಸಿದ್ಧಾಂತವನ್ನು ನೇರವಾಗಿ ತಿಳಿದುಕೊಳ್ಳುವ ಅವಕಾಶ ಪ್ರಾಪ್ತವಾಯಿತು. ಇದಲ್ಲದೆ ವಲ್ಲಭರು ಹಲವಾರು ಅದ್ವೈತ ವಿದ್ವಾಂಸರು ಮತ್ತು ಶೈವ ಪಂಥದ ಅನುಯಾಯಿಗಳೊಡನೆ ವಾದ, ವಿವಾದಗಳನ್ನು ಕೂಡ ನಡೆಸಿದರು. ಅವರ ಅಭಿಪ್ರಾಯಗಳನ್ನು ವಲ್ಲಭರು ಒಪ್ಪುತ್ತಿರಲಿಲ್ಲವಾದರೂ, ಎಂದಿಗೂ ತಮ್ಮ ಚರ್ಚೆಗಳು ಹದ್ದುಮೀರಿ ಹೋಗಲು ಅವಕಾಶ ಮಾಡಿಕೊಡುತ್ತಿರಲಿಲ್ಲ.

ಹೀಗೆ ತಮ್ಮ ದಕ್ಷಿಣಭಾರತ ತೀರ್ಥಯಾತ್ರೆಯನ್ನು ಸಂಪನ್ನಗೊಳಿಸಿದ ವಲ್ಲಭರು ವಿಜಯನಗರಕ್ಕೆ ಬಂದು ತಮ್ಮ ತಾಯಿ ಮತ್ತು ಸಹೋದರರನ್ನು ಕೂಡಿಕೊಂಡರು. ವಿಜಯನಗರವೇ ಅವರ ಕುಟುಂಬದ ಹೊಸ ನಿವಾಸಸ್ಥಾನವಾಗಿತ್ತು. ತಮ್ಮ ತಾಯಿಯೊಡನೆ ಕೆಲಕಾಲ ಕಳೆದ ನಂತರ, ಅವರು ತಮ್ಮ ತೀರ್ಥಯಾತ್ರೆಯ ಪರ್ವವನ್ನು ಮುಂದುವರೆಸಿದರು. ಈ ಬಾರಿ ಅವರ ಪಯಣ ಪಶ್ಚಿಮ ಮತ್ತು ಉತ್ತರ ಭಾರತದ ಹಲವಾರು ಪವಿತ್ರ ಕ್ಷೇತ್ರಗಳತ್ತ ಸಾಗಿತು. ಮಹಾರಾಷ್ಟ್ರದ ಕೃಷ್ಣಭಕ್ತಿಯ ಕೇಂದ್ರವಾದ ಪಂಡರಾಪುರ, ನಾಸಿಕ್, ತ್ರ್ಯಂಬಕೇಶ್ವರ, ನರ್ಮದಾ ನದಿಯ ಹಲವಾರು ಪುಣ್ಯಕ್ಷೇತ್ರಗಳು ಮತ್ತು ಮಾಲ್ವಾ ಪ್ರದೇಶಗಳಲ್ಲಿ ಅವರು ಪ್ರವಾಸ ಮಾಡಿದರು. ಒಂದೊಂದು ಕಡೆಯೂ ಹಲವು ದಿನಗಳ ಕಾಲ ವಸತಿಯನ್ನು ಹೂಡಿದರು. ಕಟ್ಟಕಡೆಗೆ ಅವರು ಕೃಷ್ಣ ಜನ್ಮಸ್ಥಾನವಾದ ಮಥುರಾ ನಗರವನ್ನು ತಲುಪಿದರು. ಬಾಲ್ಯದಲ್ಲಿ ಬೃಂದಾವನಕ್ಕೆ ತೆರಳುವ ಮುಂಚೆ ಮತ್ತು ತದನಂತರ, ದ್ವಾರಕೆಗೆ ಸ್ಥಳಾಂತರಗೊಳ್ಳುವ ಮೊದಲು ಕೃಷ್ಣನು ಈ ಮಥುರಾ ನಗರವನ್ನೇ ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದನು.

ಈ ವ್ರಜಭೂಮಿಯು ವಲ್ಲಭರಿಗೆ ವಿಶೇಷವಾಗಿ ಪ್ರಿಯವಾದ ಸ್ಥಾನವಾಗಿತ್ತು. ಶ್ರೀಕೃಷ್ಣನ ಜೀವನಕ್ಕೆ ಸಂಬಂಧಪಟ್ಟ ಪ್ರತಿಯೊಂದು ತಾಣಕ್ಕೆ ಹೋದಾಗಲೂ ಅವರಿಗೆ ಶ್ರೀಕೃಷ್ಣನ ಸಂಸರ್ಗವಾಗುತ್ತಿತ್ತು. ಒಂದು ಐತಿಹ್ಯದಂತೆ, ೧೪೯೨ರಲ್ಲಿ ಈ ಸ್ಥಳದಲ್ಲಿ ತಮ್ಮದೇ ಆದ ಒಂದು ಸಂಪ್ರದಾಯವನ್ನು ಆರಂಭಮಾಡುವಂತೆ ವಲ್ಲಭರಿಗೆ ಭಗವಂತನು ಪ್ರೇರೇಪಣೆ ಮಾಡಿದನಂತೆ. ಈ ಸಂಪ್ರ

ಗಳನ್ನೂ ಕರಗತ ಮಾಡಿಕೊಂಡನು. ಅವನಿಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗ, ತಂದೆ ಮರಣಹೊಂದಿದರು. ತಂದೆಯ ಅವಸಾನದಿಂದ ವಾರಾಣಸಿಯಲ್ಲಿ ನೆಲೆಸಿದ್ದ ಕುಟುಂಬವೂ ಬಿರುಕು ಬಿಟ್ಟಿತು. ಯುವಕನಾಗಿದ್ದ ವಲ್ಲಭನು ತೀರ್ಥಯಾತ್ರೆಗೆ ಹೊರಟುಬಿಟ್ಟನು. ಸುಮಾರು ಇಪ್ಪತ್ತು ವರ್ಷಗಳ ಕಾಲ ಅಖಂಡ ಭಾರತವನ್ನು ಮೂರು ಬಾರಿ ಸುತ್ತುಹಾಕಿದನು. ಈ ಸಂಚಾರದ ಅವಧಿಯಲ್ಲಿ ನಿಷ್ಠಾವಂತ ಬ್ರಹ್ಮಚಾರಿಯಾಗಿಯೇ ಉಳಿದನು. ತೀವ್ರವಾದ ಸಾಧನೆಯನ್ನೂ ಮಾಡಿದನು. ಕೆಲವು ಸಂಚಾರಗಳಲ್ಲಿ ಅವನ ತಾಯಿಯೂ ಅವನ ಜೊತೆಗೆ ಇದ್ದಳು. ಇನ್ನು ಕೆಲವು ಪಯಣಗಳಲ್ಲಿ ಕುಟುಂಬದ ಇತರ ಸದಸ್ಯರು ಕೂಡ ಅವನ ಸಹಚರರಾಗಿದ್ದರು.

### ಮೊದಲ ತೀರ್ಥಯಾತ್ರೆ

ಆ ಸಮಯದಲ್ಲಿ ಉತ್ತರ ಭಾರತವು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿತ್ತು. ಮುಸ್ಲಿಮರ ದಾಳಿಯೇ ಇದಕ್ಕೆ ಕಾರಣ. ಈ ಕಠಿಣ ಪರಿಸ್ಥಿತಿಯಲ್ಲಿ ತನ್ನ ಕುಟುಂಬದ ಮೂಲಸ್ಥಾನವಾದ ದಕ್ಷಿಣ ಭಾರತಕ್ಕೆ ಪ್ರಯಾಣ ಮಾಡುವುದೇ ಸೂಕ್ತವೆಂದು ವಲ್ಲಭರಿಗೆ ಅನ್ನಿಸಿತು. ಅವರು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಮಹತ್ವ ಪಡೆದ ಅನೇಕ ನಗರಗಳನ್ನು ಹಾದುಹೋಗಿ, ಕಟ್ಟಕಡೆಗೆ ವಿಜಯನಗರವನ್ನು ತಲುಪಿದರು. ಅಲ್ಲಿ ಅವರ ಸೋದರ ಮಾವ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಬಹಳ ಪ್ರಮುಖ ಸ್ಥಾನವನ್ನು ಅಲಂಕರಿಸಿದ್ದರು. ವಲ್ಲಭರು ವಿಜಯನಗರಕ್ಕೆ ಆಗಮಿಸಿದ ಸ್ವಲ್ಪ ಕಾಲದಲ್ಲಿಯೇ, ವಿಜಯನಗರದ ಪ್ರಸಿದ್ಧ ರಾಜನಾದ ಕೃಷ್ಣದೇವರಾಯನು ಅಧಿಕಾರವನ್ನು ವಹಿಸಿಕೊಂಡನು. ಅವನ ರಾಜ್ಯದಲ್ಲಿ ಬಹಳಷ್ಟು ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದವು. ಅದ್ವೈತ ತತ್ತ್ವದ ಪ್ರತಿಪಾದಕರಾದ ಶ್ರೀಶಂಕರರ ಅನುಯಾಯಿಗಳು ಮತ್ತು ದ್ವೈತ ಸಿದ್ಧಾಂತದ ಪ್ರವರ್ತಕರಾದ ಶ್ರೀಮಧ್ವರ ಅನುಯಾಯಿಗಳ ನಡುವೆ ವಾಗ್ವಿವಾದಗಳು ನಡೆಯುತ್ತಲೇ ಇದ್ದವು. ವಲ್ಲಭನಿಗೆ ಆಗ ಕೇವಲ ಹನ್ನೆರಡು ವರ್ಷ ವಯಸ್ಸು. ಅವನು ಸಹಜವಾಗಿಯೇ ಈ ವಿವಾದಗಳ ಕಡೆಗೆ ಆಕರ್ಷಿತನಾದನು. ಒಮ್ಮೆ ಶ್ರೀಶಂಕರರ ವೇದಾಂತ ಶಾಖೆಯ ನೇತಾರನೊಡನೆ ವಾದ ಮಾಡಿ ವಲ್ಲಭರು ಜಯಗಳಿಸಿದರೆಂದು ಹೇಳುತ್ತಾರೆ. ಇದರಿಂದ ಅವನು ಕೃಷ್ಣದೇವರಾಯನ ಗಮನಕ್ಕೂ ಬಂದನು. ರಾಜನು ಶ್ರದ್ಧಾಳು ವೈಷ್ಣವನಾದರೂ, ಧಾರ್ಮಿಕ ವಿಷಯಗಳಲ್ಲಿ ಉದಾರಿಯಾಗಿದ್ದನು. ವಲ್ಲಭರ ಈ ಜಯವನ್ನು ಕೊಂಡಾಡಲು ಮತ್ತು ಅವರಿಗೆ ಆಚಾರ್ಯ ಎಂಬ ಗೌರವ ಪದವಿಯನ್ನು ನೀಡುವ ಸಲುವಾಗಿ, ಕೃಷ್ಣದೇವರಾಯನು ವಲ್ಲಭರಿಗೆ ಕನಕಾಭಿಷೇಕವನ್ನು ಮಾಡಿದನಂತೆ. ಕನಕಾಭಿಷೇಕವೆಂದರೆ ಚಿನ್ನದ ನಾಣ್ಯಗಳಿಂದ ಅಭಿಷೇಕವನ್ನು ಮಾಡುವುದು. ಇನ್ನು ಕೆಲವರು ಈ ಕನಕಾಭಿಷೇಕವು ಭವಿಷ್ಯದ ಯಾವುದೋ ಅವಧಿಯಲ್ಲಿ ನಡೆಯಿತೆಂದು ಹೇಳುತ್ತಾರೆ. ವಲ್ಲಭರು ವಿಜಯನಗರದಲ್ಲಿ ಸುಮಾರು ೨-೩ ವರ್ಷಗಳ ಕಾಲ ನೆಲೆಸಿದರು. ಆ ಸಮಯದಲ್ಲಿ ಅವರು ವಿಷ್ಣುಸ್ವಾಮಿ ಮತ್ತು ಮಧ್ವರು ಪ್ರತಿಪಾದಿಸಿದ ವೈಷ್ಣವ ತತ್ತ್ವವನ್ನು ಅಧ್ಯಯನ ಮಾಡಿ ಅಗಾಧ ಪಾಂಡಿತ್ಯವನ್ನು ಗಳಿಸಿಕೊಂಡರು. ಮಧ್ವರು ಬೋಧಿಸಿದ ತತ್ತ್ವಶಾಸ್ತ್ರವು ವಲ್ಲಭರ ಸಿದ್ಧಾಂತಕ್ಕಿಂತ ಭಿನ್ನವಾಗಿದ್ದರೂ, ಆ ಸಿದ್ಧಾಂತದೊಡನೆ ಅವರು ಇಟ್ಟುಕೊಂಡಿದ್ದ ಸಂಬಂಧವು ಬಹಳ ಆಪ್ಯಾಯಮಾನವಾಗಿತ್ತು, ಅನ್ಯೋನ್ಯವಾಗಿತ್ತು. ಭಾಗವತ ಪುರಾಣದ ಅಧ್ಯಯನವನ್ನು ವಲ್ಲಭರಿಗೆ ಪರಿಚಯಿಸಿದವರು ಮಧ್ವ ಸಂಪ್ರದಾಯಕ್ಕೆ ಸೇರಿದ ಸಂನ್ಯಾಸಿಗಳಾದ ಮಾಧವೇಂದ್ರ ಯತಿ ಎನ್ನುವವರು. ಈ ಪವಿತ್ರ ಗ್ರಂಥವನ್ನು ತಮ್ಮ ವೃದ್ಧಾವಸ್ಥೆಯಲ್ಲಿ ವಲ್ಲಭರು ಜನಸಾಮಾನ್ಯರಲ್ಲಿ ಪ್ರಚುರಪಡಿಸಿದರು. ಇದಲ್ಲದೆ ಮಾಧವೇಂದ್ರ ಯತಿಗಳು ಮುಂದಿನ ದಿನಗಳಲ್ಲಿ ಗೋಕುಲದಲ್ಲಿ ಗೋವರ್ಧನ ಮಂದಿರವನ್ನು ಸ್ಥಾಪಿಸುವುದಕ್ಕೆ ವಲ್ಲಭರಿಗೆ ಸಹಾಯ ಮಾಡಿದರು. ಇಷ್ಟೂ ಅಲ್ಲದೆ, ವಲ್ಲಭರ ಕಡೆಯ ದಿನಗಳಲ್ಲಿ ಮಾಧವೇಂದ್ರರು ಸಂನ್ಯಾಸವನ್ನು ಕೂಡ ಪ್ರದಾನ ಮಾಡಿದರು.

ವಲ್ಲಭರು ವಿಜಯನಗರದಲ್ಲಿ ವಾಸಮಾಡಿದ್ದು ಕೇವಲ ಎರಡು ಮೂರು ವರ್ಷಗಳ ಕಾಲ ಮಾತ್ರ. ಈ ಕಾಲದಲ್ಲಿ ಅವರ ಮೇಧಾವಿತನವು ಪ್ರಬುದ್ಧತೆಯನ್ನು ಪಡೆದುಕೊಳ್ಳುವ ಅವಕಾಶವನ್ನು ಪಡೆದುಕೊಂಡಿತು. ಬೌದ್ಧಿಕ ಉತ್ಥಾನದ ಅಗ್ರಗಾಮಿಯಾಗಿದ್ದ ಆ ನಗರದಲ್ಲಿದ್ದ ನೂರಾರು ಪಂಡಿತರು ಮತ್ತು ವಿವಿಧ ಪಂಥಗಳ ಅನುಯಾಯಿಗಳ ಸಂಪರ್ಕವು ವಲ್ಲಭರ ಅಪೂರ್ವ ಬೌದ್ಧಿಕ ವಿಕಾಸಕ್ಕೆ ಅನುವು ಮಾಡಿಕೊಟ್ಟಿತು. ವಲ್ಲಭರ ನಿಜವಾದ ತೀರ್ಥಯಾತ್ರೆಯು, ಅಂದರೆ ಅವರ ಎರಡನೆಯ ಯಾತ್ರೆಯು ಆರಂಭವಾಗಿದ್ದು ಅವರ ಹದಿನೈದನೆಯ ವಯಸ್ಸಿನಲ್ಲಿ. ಇದಕ್ಕೆ ಮುಂಚೆ ವಲ್ಲಭರು ತಮ್ಮ ತಾಯಿ ಮತ್ತು ಸಹೋದರರನ್ನು ತಮ್ಮ ಸೋದರಮಾವನ ಆಶ್ರಯದಲ್ಲಿ ಬಿಟ್ಟರು. ಅನಂತರವಷ್ಟೇ ತಮ್ಮ ಇಬ್ಬರು ಮೂವರು ಶ್ರದ್ಧಾಳು ಅನುಯಾಯಿಗಳೊಡನೆ ತಮ್ಮ ಈ ಎರಡನೆಯ ತೀರ್ಥಯಾತ್ರೆಗೆ ಹೊರಟುಬಿಟ್ಟರು. ಅದು ಹಲವಾರು ವರ್ಷಗಳ ಕಾಲ ಮುಂದುವರಿಯಿತು. ವಲ್ಲಭರ ಈ ಯಾತ್ರೆಯ ಹಲವಾರು ಐತಿಹ್ಯಗಳು ದಾಖಲೆಗಳಾಗಿ ಇನ್ನೂ ಉಳಿದುಬಂದಿವೆ. ಹೀಗಾಗಿ ಅವರು ದರ್ಶಿಸಿದ ಸ್ಥಳಗಳು, ದಿನಾಂಕಗಳು ಮತ್ತು ಯಾತ್ರೆಯ ಕ್ರಮದಲ್ಲಿಯೂ ವಿಭಿನ್ನ ವಿವರಣೆಗಳನ್ನು ಕಾಣುತ್ತೇವೆ. ಅವರು ಇಡೀ ದಕ್ಷಿಣ ಭಾರತವನ್ನು ಸಂದರ್ಶಿಸಿದರು. ಹಲವಾರು ಪ್ರಮುಖ ದೇವಸ್ಥಾನ ನಗರಗಳಿಗೆ ಮತ್ತು ಆಧ್ಯಾತ್ಮಿಕ ಅಧ್ಯಯನ ಕೇಂದ್ರಗಳಿಗೆ ಭೇಟಿಕೊಟ್ಟರು. ಈ ಸ್ಥಳಗಳಲ್ಲಿ ಭಾರತದ ಧಾರ್ಮಿಕ ಸಂಸ್ಕೃತಿಯು ತನ್ನ ಪವಿತ್ರತೆಯನ್ನು ಇನ್ನೂ ಉಳಿಸಿಕೊಂಡಿತ್ತು. ಇದಕ್ಕೆ ವಿರುದ್ಧವಾಗಿ, ಉತ್ತರ ಭಾರತವು ಮುಸ್ಲಿಂ ಆಕ್ರಮಣಗಳು ಮತ್ತು ದಬ್ಬಾಳಿಕೆಗಳ ಕಾರಣದಿಂದ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಸ್ತವ್ಯಸ್ತಗೊಂಡಿತ್ತು. ವಲ್ಲಭರು ದರ್ಶಿಸಿದ ಸ್ಥಳಗಳಲ್ಲಿ ಮುಖ್ಯವಾದುವು

# ಶ್ರೀ ವಲ್ಲಭಾಚಾರ್ಯರು

ಆಂಗ್ಲಮೂಲ: ಸ್ವಾಮಿ ತಪಸ್ಯಾನಂದ

ಕನ್ನಡಕ್ಕೆ: ಸ್ವಾಮಿ ವೀರೇಶಾನಂದ



## ಭಾಗ ೧

### ಬಾಲ್ಯ ಜೀವನ

ರಾಮಾನುಜ (೧೦೧೭–೧೧೩೭), ನಿಂಬಾರ್ಕ (೧೩ನೆಯ ಶತಮಾನ) ಮತ್ತು ಮಧ್ವ (೧೨೩೮–೧೩೧೭) – ಈ ಎಲ್ಲ ವೈಷ್ಣವ ಆಚಾರ್ಯರು ವಲ್ಲಭಾಚಾರ್ಯರಿಗಿಂತಲೂ ಹಿಂದೆಯೇ ಬಾಳಿ ಬದುಕಿದರು. ಚೈತನ್ಯ (೧೪೮೫–೧೫೩೩) ಇವರ ಸಮಕಾಲೀನರು. ವಲ್ಲಭರು (೧೪೭೯–೧೫೩೧) ತೆಲುಗು ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು. ಲಕ್ಷ್ಮಣ ಭಟ್ಟ ಮತ್ತು ಯೆಲ್ಲಮ್ಮಗಾರು – ಈ ದಂಪತಿಗಳಿಗೆ ಹುಟ್ಟಿದರು. ಲಕ್ಷ್ಮಣ ಭಟ್ಟರು ಪಂಡಿತರೂ ಭಗವದ್ಭಕ್ತರೂ ಆದ ಕುಟುಂಬಕ್ಕೆ ಸೇರಿದವರು. ಕೃಷ್ಣಾನದಿಯ ದಕ್ಷಿಣ ತಟದಲ್ಲಿರುವ ಕಾಕರವಾಡ್ ಎಂಬ ಪಟ್ಟಣದಲ್ಲಿ ಈ ಕುಟುಂಬದವರು ವಾಸಿಸುತ್ತಿದ್ದರು. ಯೆಲ್ಲಮ್ಮಗಾರುವಿನ ತಾಯಿ ಬಹಳ ಪ್ರಭಾವಯುತ ಕುಟುಂಬಕ್ಕೆ ಸೇರಿದವಳು. ಆಕೆಯ ತಂದೆಯಾದ ಶರ್ಮರು ವಿಜಯನಗರದ ರಾಜಾಸ್ಥಾನದಲ್ಲಿ ಆಸ್ಥಾನ ಪುರೋಹಿತರಾಗಿದ್ದರು. ತಂದೆ ಲಕ್ಷ್ಮಣ ಭಟ್ಟರು ವಾರಾಣಸಿಗೆ ತಮ್ಮ ಕುಟುಂಬವನ್ನು ಸ್ಥಳಾಂತರಿಸಿದರು. ವಾರಾಣಸಿ ಅಥವಾ ಕಾಶೀಧಾಮವು ಪವಿತ್ರ ತೀರ್ಥಕ್ಷೇತ್ರವೂ ಹೌದು, ಹಾಗೆಯೇ ಪಂಡಿತೋತ್ತಮರಿಗೆ ಹೆಸರುವಾಸಿಯಾದ ಗಣ್ಯಸ್ಥಾನವೂ ಹೌದು. ಆದರೆ ಲಕ್ಷ್ಮಣ ಭಟ್ಟರು ಈ ಕ್ಷೇತ್ರದಿಂದ ಪಲಾಯನ ಮಾಡುವ ಸಂದಿಗ್ಧ ಪರಿಸ್ಥಿತಿ ಉಂಟಾಯಿತು. ಏಕೆಂದರೆ ಕಾಶೀನಗರದ ಮೇಲೆ ಮುಸ್ಲಿಮರ ದಾಳಿ ಆಗುವ ದಟ್ಟ ವದಂತಿ ಹರಡಿತ್ತು. ಲಕ್ಷ್ಮಣ ಭಟ್ಟರು ತಮ್ಮ ಸ್ವಂತ ಗ್ರಾಮಕ್ಕೆ ತಿರುಗಿ ಹೋಗುವ ಯೋಜನೆ ಹಾಕಿಕೊಂಡಿದ್ದರು ಎಂದು ಕಾಣುತ್ತದೆ. ಈ ರೀತಿ ಪಲಾಯನ ಮಾಡುವಾಗ, ಅವರು ಇಂದಿನ ಆಧುನಿಕ ನಗರ ರಾಯಪುರಕ್ಕೆ ಸಮೀಪವಿರುವ ಚಂಪಾರಣ್ಯದ ಸನಿಹದ ದಟ್ಟ ಅರಣ್ಯವನ್ನು ಹಾದುಹೋಗುತ್ತಿದ್ದರು. ಅಲ್ಲಿಯೇ ಮುಂದೆ ವಲ್ಲಭ ಎಂದು ಹೆಸರಾದ ಮಗುವಿನ ಜನನವಾಯಿತು. ಹುಟ್ಟಿದಾಗ ಚಲನೆಯೇ ಇಲ್ಲದೇ ಇದ್ದರೂ, ಅದ್ಭುತವೋ ಎನ್ನುವಂತೆ ಮಗು ಬದುಕಿಕೊಂಡಿತು. ಚಂಪಾರಣ್ಯದಲ್ಲಿ ಸ್ವಲ್ಪ ಕಾಲ ನೆಲೆಸಿದ ನಂತರ, ಲಕ್ಷ್ಮಣ ಭಟ್ಟರು ಕಾಶೀನಗರಕ್ಕೇ ಹಿಂತಿರುಗಿದರು. ಏಕೆಂದರೆ, ಎಲ್ಲರೂ ಭಯಪಡುತ್ತಿದ್ದ ಮುಸ್ಲಿಮರ ದಾಳಿ ಆ ಸಮಯದಲ್ಲಿ ನಡೆಯಲೇ ಇಲ್ಲ.

ಯುವ ವಲ್ಲಭನು ಕಾಶೀನಗರದಲ್ಲಿಯೇ ಬೆಳೆದನು. ತನ್ನ ಅಸಾಧಾರಣ ಬುದ್ಧಿಮತ್ತೆಯನ್ನು ಎಲ್ಲರಿಗೂ ಪ್ರದರ್ಶಿಸಿದನು. ಎಳೆಯ ಏಳನೆಯ ವಯಸ್ಸಿನಲ್ಲಿಯೇ ಅವನ ವಿದ್ಯಾಭ್ಯಾಸ ಆರಂಭವಾಯಿತು. ವಿಷ್ಣುಚಿತ್ತರೆಂಬ ಗುರುಗಳ ಹತ್ತಿರ ವಲ್ಲಭನು ನಾಲ್ಕು ವೇದಗಳನ್ನೂ ಅಧ್ಯಯನ ಮಾಡಿ ಪಾರಂಗತನಾದನು. ವೇದಾಂಗಗಳನ್ನೂ, ಷಡ್‌ದರ್ಶನಗಳನ್ನೂ ಹಾಗೆಯೇ ಭಗವದ್ಗೀತೆ, ಭಾಗವತ, ಪಾಂಚರಾತ್ರ ಮುಂತಾದ ಧರ್ಮಗ್ರಂಥ

ಯನ್ನು ಅದು ಹೇಗೆ ಕೆಳಮಟ್ಟಕ್ಕೆ ತಳ್ಳಬಲ್ಲುದು ಎಂಬುದನ್ನು ಸ್ವಾಮಿ ರಾಮಕೃಷ್ಣಾನಂದರು ಹೃದಯಂಗಮವಾಗಿ ವಿವರಿಸಿದ್ದಾರೆ. ಇದನ್ನು ಹೇಳುವುದರಲ್ಲಿ ಒಂದು ಸಂದೇಶ ಅಡಕವಾಗಿದೆ. ಇಲ್ಲಿ ಜೀವನ ನಾಟಕವು ಎರಡು ಕೇಂದ್ರಗಳಲ್ಲಿ ನಡೆಯುತ್ತದೆ: ಶ್ರೀರಂಗಂ ಮತ್ತು ಕಾಂಚೀಪುರಂನಲ್ಲಿ. ಅವರ ಅತಿಮುಖ್ಯವಾದ ಸಂದೇಶ ಯಾವುದೆಂದರೆ ಯಾಮುನಾಚಾರ್ಯರು ಹೇಗೆ ಎಲ್ಲವನ್ನೂ ತ್ಯಾಗಮಾಡಿ ಶ್ರೀರಂಗನಾಥಸ್ವಾಮಿಯಲ್ಲಿ ಶರಣಾಗತಿಯನ್ನು ಹೊಂದುತ್ತಾರೆ ಎಂಬುದು. ಇನ್ನೊಂದು ಅಧ್ಯಾಯದಲ್ಲಿ ಯಾಮುನಾಚಾರ್ಯರು ರಚಿಸಿರುವ **'ಸ್ತೋತ್ರರತ್ನ'** ಸೇರಿದೆ. ಇದು ಶ್ರೀವೈಷ್ಣವ ಭಕ್ತರಿಗೆ ಪ್ರಿಯವಾದದ್ದು.

ಶ್ರೀರಾಮಾನುಜರು ಶ್ರೀಪೆರುಂಬದೂರಿನ ಭಕ್ತ ದಂಪತಿಗಳಾದ ಕೇಶವಾಚಾರ್ಯ ಮತ್ತು ಕಾಂತಿಮತಿಯವರ ಮಗನಾಗಿ ಹುಟ್ಟಿದುದು; ಅದ್ವೈತ ಪಂಡಿತರಾಗಿದ್ದ ಯಾದವಪ್ರಕಾಶರಲ್ಲಿ ಶಿಷ್ಯವೃತ್ತಿಯನ್ನು ಕೈಗೊಂಡುದು; ಒಂದು ಶ್ಲೋಕದ ಅರ್ಥ ವಿವರಿಸುವಲ್ಲಿ ಕಿರಿಯ ರಾಮಾನುಜ ಬೇರೆ ಅರ್ಥವನ್ನು ವಿವರಿಸಿದುದು ಮತ್ತು ವಾದ, ವಿವಾದಗಳು ನಡೆದದ್ದು; ಯಾದವಪ್ರಕಾಶರಲ್ಲಿದ್ದ ತಾಮಸಿಕಗುಣವು ರಾಮಾನುಜರನ್ನು ತನಗೆ ಪ್ರತಿಸ್ಪರ್ಧಿಯೆಂದು ತಿಳಿದದ್ದು; ವಿಚಾರಗಳನ್ನು ಸ್ವಾಮಿ ರಾಮಕೃಷ್ಣಾನಂದರು ಅತ್ಯಂತ ಪರಿಣಾಮಕಾರಿಯಾಗಿ ವಿವರಿಸಿರುತ್ತಾರೆ. ಕೊನೆಗೆ ಯಾದವ ಪ್ರಕಾಶರು ಶ್ರೀರಾಮಾನುಜರ ಶಿಷ್ಯವೃತ್ತಿಯನ್ನು ಸ್ವೀಕರಿಸುತ್ತಾರೆ. ಇನ್ನೊಂದು ಕ್ಲಿಷ್ಟವಾದ ಮತ್ತು ಸೂಕ್ಷ್ಮವಾದ ವಿಷಯವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಪ್ರಾಪಂಚಿಕತೆಯಲ್ಲಿ ಮುಳುಗಿದ್ದ ಹೆಂಡತಿಯನ್ನು ಅವಳ ತವರು ಮನೆಗೆ ಕಳಿಸಿ ರಾಮಾನುಜರು ಸಂನ್ಯಾಸವನ್ನು ಸ್ವೀಕರಿಸುತ್ತಾರೆ. ಈ ಸೂಕ್ಷ್ಮ ವಿಷಯವನ್ನು ವಿಮರ್ಶಾತ್ಮಕವಾಗಿ ವಿವರಿಸಿ ಸಮರ್ಥನೆ ಕೊಡುತ್ತಾರೆ. ಇದು ಈ ಪುಸ್ತಕದಲ್ಲಿನ ಒಂದು ವಿಶೇಷ.

ಶ್ರೀರಾಮಾನುಜರ ಜೀವನಕ್ಕೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳ ಬಗ್ಗೆಯೂ, ಆಧಾರಯುಕ್ತವಾದ ಮತ್ತು ವಾತ್ಸಲ್ಯಪೂರಿತವಾದ ವಿವರಣೆಯನ್ನು ಕೊಡಲಾಗಿದೆ. ಮುಖ್ಯವಾಗಿ ಕಾಂಚೀಪೂರ್ಣ ಎಂಬ ಕೆಳಜಾತಿಯ ನಿಷ್ಠಾವಂತ ಭಕ್ತನಿಂದ ರಾಮಾನುಜರು ಆಧ್ಯಾತ್ಮಿಕ ಮಾರ್ಗದರ್ಶನ ಪಡೆಯುತ್ತಾರೆ. ಯಾಮುನಾಚಾರ್ಯರ ಶಿಷ್ಯರಾದ ಮಹಾಪೂರ್ಣ ಮತ್ತು ತಿರುಕೊಟ್ಟಿಯೂರ್ ಪೂರ್ಣ ಅವರ ಜತೆಗಿನ ಆಧ್ಯಾತ್ಮಿಕ ಸಂಬಂಧವನ್ನೂ ಇಲ್ಲಿ ವಿವರಿಸಲಾಗಿದೆ. ಶ್ರೀರಾಮಾನುಜರು ಕಡೆಗೂ ಯಾಮುನಾಚಾರ್ಯರನ್ನು ಬದುಕಿದ್ದಾಗ ನೋಡಲಾಗಲಿಲ್ಲ. ಆದರೆ ಅವರ ಮೃತಶರೀರದ ಮುಂದೆ ಮೂರು ಆಶ್ವಾಸನೆಗಳನ್ನು ನೀಡುತ್ತಾರೆ. ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯುವುದು; ಶ್ರೀವೈಷ್ಣವ ಮತವನ್ನು ಪ್ರಚಾರಮಾಡುವುದು ಮತ್ತು ತಿರುವಾಯ್‌ಮೊಳಿಗೆ ಅರ್ಥ ಬರೆಸುವುದು. ಈ ವಾಗ್ದಾನಗಳನ್ನು ಕೊಟ್ಟ ನಂತರ ಯಮುನಾಚಾರ್ಯರ ಮೃತ ಶರೀರದ ಮಡಿಸಿಕೊಂಡಿದ್ದ ಮೂರು ಬೆರಳುಗಳು ನೇರವಾದವು. ಶ್ರೀರಾಮಾನುಜರ ಜೀವನವು ಆದರ್ಶಪ್ರಾಯ ಮತ್ತು ಅನುಕರಣೀಯವಾದದ್ದು. ಅದು ಎಷ್ಟು ಸೊಗಸಾಗಿ ಮೂಡಿ ಬಂದಿದೆಯೆಂದರೆ ಓದುಗನು ಯಾವ ಮತ ಪಂಥಕ್ಕೂ ಸೇರಿದವನಾಗಿದ್ದರೂ ಇದರಲ್ಲಿ ಆತ್ಮೋದ್ಧಾರದ ಜ್ಞಾನದ ಗಣಿಯನ್ನು ಪಡೆದುಕೊಳ್ಳುತ್ತಾನೆ. ಇದಕ್ಕೆ ಸ್ವಾಮಿ ರಾಮಕೃಷ್ಣಾನಂದರ ವಿದ್ವತ್‌ಪೂರ್ಣವಾದ, ಖಚಿತ ಮತ್ತು ನಿಖರವಾದ ಬರಹವೇ ಕಾರಣ.

**ಅಂತಿಮವಾಗಿ ಜುಲೈ ೨೦೧೭ರಲ್ಲಿ ಪ್ರಕಟವಾಗಿರುವ ೫ನೆಯ ಆವೃತ್ತಿಯ ಬಗ್ಗೆ ಸಂಕ್ಷಿಪ್ತ ಸಮೀಕ್ಷೆ:**

ಶ್ರೀ ರಾಮಾನುಜರ ೧೦೦೦ದ ಜನ್ಮ ಸಂವತ್ಸರದಲ್ಲಿ ಇದನ್ನು ಪ್ರಕಟಿಸಲಾಗಿದೆ. ಇದು ಎಲ್ಲ ವಿಧದಲ್ಲಿಯೂ ಅತ್ಯುತ್ತಮವಾಗಿ ತಯಾರಾಗಿರುವ ವೃತ್ತಿನಿರತ ಕೆಲಸವಾಗಿದೆ; ಅಧ್ಯಾಯಗಳ ಮರುವಿಂಗಡಣೆ ಮತ್ತು ಪ್ರತಿಯೊಂದು ವಿಷಯದ ಕ್ರಮಬದ್ಧ ಪ್ರಸ್ತುತಿ; ಇಂಗ್ಲಿಷ್ ಅವತರಣಿಕೆಯ ಬರಹಗಾರರ ವಿಷಯವನ್ನೂ ಹೆಚ್ಚು ವಿಶದವಾಗಿ ಬರೆದಿರುವುದು ಇದರ ವಿಶಿಷ್ಟತೆ. ಅಧಿಕೃತ ಛಾಯಾಚಿತ್ರಗಳು ಅದರಲ್ಲಿಯೂ ಕರ್ನಾಟಕದ ಮೇಲುಕೋಟೆಗೆ ಸಂಬಂಧಿಸಿದ ಚಿತ್ರಗಳು ಇಲ್ಲಿವೆ; ಅವು ಕನ್ನಡನಾಡಿನ ಭಕ್ತರಿಗೆ, ಅದರಲ್ಲೂ ಶ್ರೀವೈಷ್ಣವ ಮತದವರಿಗೆ ಮುಖ್ಯವಾಗುತ್ತವೆ. ಈ ೫ನೆಯ ಆವೃತ್ತಿ ಸಂಗ್ರಹ ಯೋಗ್ಯವಾಗಿದೆ. ವಿಶ್ವವಿದ್ಯಾಲಯದ ಪುರಾತತ್ತ್ವ ಮತ್ತು ಪ್ರಾಗೈತಿಹಾಸಿಕ ಪಠ್ಯಪುಸ್ತಕಗಳ ಪಾಠಗಳಂತೆ ಈ ವಿವರಗಳು ಕಂಡುಬರುತ್ತವೆ. ಅನೇಕರು ಈ ಪವಿತ್ರ ಚಿತ್ರಗಳನ್ನು ಬೇರೆಯಾಗಿ ಪ್ರತಿ ಮಾಡಿಕೊಂಡು ಪೂಜೆಗಾಗಿ ಉಪಯೋಗಿಸಿಕೊಳ್ಳಬಹುದು. ಈ ಆವೃತ್ತಿಯಲ್ಲಿ ವಿಷಯಗಳನ್ನು ವಿಂಗಡಣೆ ಮಾಡುವ ರೀತಿ, ಅಡಿಟಿಪ್ಪಣಿಗಳು, ಕೊನೆಯಲ್ಲಿರುವ ಗ್ರಂಥವಿವರಣೆ ಇವು ಹಿಂದಿನ ಆವೃತ್ತಿಗಿಂತ ಉತ್ತಮವಾಗಿ ಮೂಡಿಬಂದು, ಸಂಪಾದನೆಯ ಶ್ರೇಷ್ಠತೆಯನ್ನೂ, ಕುಶಲತೆಯನ್ನೂ ಸೂಚಿಸುತ್ತದೆ. ಇನ್ನೊಂದು ಪುಟದಲ್ಲಿ ಶ್ರೀ ರಾಮಾನುಜರಿಂದ ರಚಿತವಾದ ಮತ್ತು ಅವರ ಬಗ್ಗೆ ಇತರರು ರಚಿಸಿರುವ ಪುಸ್ತಕಗಳ ಪಟ್ಟಿಯನ್ನು ಕೊಡಲಾಗಿದೆ. ಇದು ವಿದ್ವಾಂಸರಿಗೆ ಹೆಚ್ಚು ಉಪಯುಕ್ತವಾದುದು. ಯಾಮುನಾಚಾರ್ಯರ ಮಗ ಚೋಟ್ಟೈನಂಬಿಯೂ ಸೇರಿದಂತೆ ೭೪ ಗುರು ಪರಂಪರೆಯ ಪೀಠಾಧಿಪತಿಗಳ ಹೆಸರುಗಳು ಇವೆ. ಶ್ರೀ ಮನವಾಳ ಮಾಮುನಿಯು ರಚಿಸಿರುವ 'ಯತಿರಾಜ ವಿಂಶತಿ'ಯು ಶ್ರೀರಾಮಾನುಜರನ್ನು ಕುರಿತ ಪ್ರಾರ್ಥನೆಯಾಗಿದ್ದು ನಿತ್ಯಪಾರಾಯಣ ಮಾಡುವವರಿಗೆ ಅನುಕೂಲವಾಗಿದೆ. ೧೨ ಜನ ಆಳ್ವಾರರುಗಳ ೪೦೦೦ ಶ್ಲೋಕಗಳ 'ದಿವ್ಯಪ್ರಬಂಧಂ' ಸೇರಿಸಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಸ್ಥಳದ ಅಭಾವದಿಂದ ಈ ಭಕ್ತಿಮಾರ್ಗ ಪ್ರವರ್ತಕರಾದ ಶ್ರೇಷ್ಠ ಭಕ್ತರ ನುಡಿಗಳನ್ನು ಸೇರಿಸಲು ಸಾಧ್ಯವಾಗಿಲ್ಲ. ಶ್ರೀರಾಮಕೃಷ್ಣರ ಪರಂಪರೆಯ ಭಕ್ತರಿಗೆ ಮೆಚ್ಚುಗೆಯಾಗುವಂತಹ ಶ್ರೀರಾಮಾನುಜರನ್ನು ಕುರಿತು ಸ್ವಾಮಿ ವಿವೇಕಾನಂದರು ಹೇಳಿರುವುದನ್ನು ಸೇರಿಸಿರುವುದು ಸ್ವಾಗತಾರ್ಹವಾದುದು.

ಒಟ್ಟಿನಲ್ಲಿ ಈ ಅಮೂಲ್ಯವಾದ ೫ನೆಯ ಆವೃತ್ತಿಯ ಪ್ರಕಾಶಕರಿಗೆ ನಮ್ಮ ಅಪಾರ ಮೆಚ್ಚುಗೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸಬೇಕು. ಪ್ರಕಾಶನದ ಗುಣಮಟ್ಟಕ್ಕಾಗಿಯೂ ಇದು ಮೆಚ್ಚುಗೆಗೆ ಪಾತ್ರವಾಗುತ್ತದೆ.

*— ಎನ್.ಎಸ್.ಚಕ್ರವರ್ತಿ (ಅನು: ಎಲ್.ಜಿ.ನಾಗೇಶರಾವ್)*

ಕುರಿತ ಇನ್ನೊಂದು ಪುಸ್ತಕವನ್ನು ರಚಿಸಿದರು. ‘Bhakti schools of Vedanta’ (ವೇದಾಂತದ ಭಕ್ತಿಪಂಥಗಳು) ಎಂಬ ಈ ಪುಸ್ತಕವೂ ಚೆನ್ನೈ ರಾಮಕೃಷ್ಣ ಮಠದಿಂದಲೇ ಪ್ರಕಟವಾಯಿತು. ಶ್ರೀರಾಮಾನುಜರ ಜೀವನಚರಿತ್ರೆಗೆ ಇದು ಒಂದು ಅನುಬಂಧ ಪುಸ್ತಕದಂತಿದೆ. ಇದರಲ್ಲಿ ಆಚಾರ್ಯರಾದ ರಾಮಾನುಜ, ನಿಂಬಾರ್ಕ, ಮಧ್ವ , ವಲ್ಲಭ ಮತ್ತು ಚೈತನ್ಯರ ಭಕ್ತಿಪಂಥಗಳನ್ನು ವಿವರಿಸಲಾಗಿದೆ. ಅವುಗಳ ವಿಮರ್ಶೆಯನ್ನು ಈ ಲೇಖನದಲ್ಲಿ ತೆಗೆದುಕೊಳ್ಳುವುದಿಲ್ಲ.

‘ಉದ್ಬೋಧನ’ದಲ್ಲಿ ಪ್ರಕಟವಾದ ಬಂಗಾಳಿ ಲೇಖನಗಳ ಇಂಗ್ಲಿಷ್ ಭಾಷಾಂತರಗಳನ್ನು ಚೆನ್ನೈ ಮಠದ ಇಂಗ್ಲಿಷ್ ಪತ್ರಿಕೆ ‘ವೇದಾಂತ ಕೇಸರಿ’ಯಲ್ಲಿ ೧೯೪೯ರಿಂದ ಏಪ್ರಿಲ್ ೧೯೫೪ರ ವರೆಗೆ ಪ್ರಕಟಿಸಲಾಯಿತು. ಈ ಅನುವಾದಗಳನ್ನು ಮಾಡಿದವರು ಶ್ರೀರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳೂ, ವಿದ್ವಾಂಸರೂ ಆಗಿದ್ದ ಸ್ವಾಮಿ ಬುಧಾನಂದರು. ಈ ಅನುವಾದಿತ ಲೇಖನಗಳ ಹಸ್ತಪ್ರತಿಗಳನ್ನು ಶ್ರೀವೈಷ್ಣವ ಮತದ ಪರಂಪರೆ, ಆಚಾರಗಳಲ್ಲಿ ನಿಷ್ಣಾತರಾದವರಿಂದ ಪರಿಷ್ಕರಣೆ ಮಾಡಿಸಲಾಯಿತು. ‘ಶ್ರೀ ರಾಮಕೃಷ್ಣ ವಿಜಯಂ’ನ ಸಂಪಾದಕರಾಗಿದ್ದ ಸ್ವಾಮಿ ಪರಮಾತ್ಮಾನಂದರು ಮತ್ತು ಸ್ವಾಮಿ ಆದಿದೇವಾನಂದರು ಈ ಕೆಲಸದಲ್ಲಿ ನೆರವು ನೀಡಿದರು. ಈ ಲೇಖನಗಳನ್ನು ಒಳಗೊಂಡ ಮೊದಲ ಆವೃತ್ತಿಯನ್ನು ೧೯೫೯ರಲ್ಲಿ ಪ್ರಕಟಿಸಲಾಯಿತು.

## ಪುಸ್ತಕವನ್ನು ಕುರಿತು ಕೆಲವು ಮಾತುಗಳು

ಸ್ವಾಮಿ ರಾಮಕೃಷ್ಣಾನಂದರಿಂದ ವಿರಚಿತವಾದ ಶ್ರೀರಾಮಾನುಜರ ಜೀವನವು ಸತ್ಯನಿಷ್ಠವಾದ ಮತ್ತು ಪ್ರಮಾಣ ಸಹಿತವಾದ ಗ್ರಂಥವಾಗಿದೆ. ಅದನ್ನು ಒಬ್ಬ ಶ್ರೇಷ್ಠ ವಿದ್ವಾಂಸರೂ ಭಕ್ತರೂ, ಮತ್ತು ಸಾಧಕರೂ ಆಗಿದ್ದ ಸ್ವಾಮಿ ರಾಮಕೃಷ್ಣಾನಂದರಂಥವರು ಮಾತ್ರ ರಚಿಸಬಲ್ಲರು. ಶ್ರೀರಾಮಕೃಷ್ಣರ ನೇರ ಶಿಷ್ಯರೂ ಆಗಿದ್ದ ಅವರು ಅವತಾರ ಪುರುಷರೊಬ್ಬರ ಜೀವನ ಚರಿತ್ರೆಯನ್ನು ರಚಿಸಲು ಯೋಗ್ಯರಾಗಿದ್ದರು. ಶ್ರೀರಾಮಕೃಷ್ಣರ ಪರಂಪರೆಯ ವಿಶಾಲ ಹಾಗೂ ಸಾರ್ವತ್ರಿಕ ಧ್ಯೇಯಗಳ ನಿಕಟ ಸಂಪರ್ಕವುಳ್ಳವರಿಗೆ ಶ್ರೀರಾಮಾನುಜರನ್ನು ಕುರಿತ ಈ ಲೇಖನಗಳು ಹೆಚ್ಚು ಸ್ಫೂರ್ತಿದಾಯಕವಾದುವು. ತಮ್ಮ ವಿದ್ವಾಂಸ ಸ್ನೇಹಿತರ ಸಹಕಾರದಿಂದ ಮತ್ತು ಕೆಲವು ಸಂಸ್ಕೃತ ಆಕರ ಗ್ರಂಥಗಳಿಂದ ವಿಷಯಸಂಗ್ರಹ ಮಾಡಿ ಸ್ವಾಮಿ ರಾಮಕೃಷ್ಣಾನಂದರು ಕೃತಿರಚನೆ ಮಾಡಿದ್ದಾರೆ. ಅವರಿಗೆ ಈ ವಿಷಯದಲ್ಲಿದ್ದ ಸಹಚಿಂತನೆ, ಹೃದಯವಂತಿಕೆ, ಅವರ ಉನ್ನತ ಮಟ್ಟದ ಆಧ್ಯಾತ್ಮಿಕ ಸ್ಥಿತಿಗಳು ಮತ್ತು ಆಳವಾದ ವಿದ್ವತ್‌ಪೂರ್ಣ ಜ್ಞಾನ ಈ ಲೇಖನಗಳ ಉದ್ದಕ್ಕೂ ಪ್ರತಿಬಿಂಬಿತವಾಗಿವೆ. ಸ್ವಾಮಿ ರಾಮಕೃಷ್ಣಾನಂದರು ವಿವರಿಸಿರುವ ವಿಷಯಗಳು ದಕ್ಷಿಣ ಭಾರತದ ಭಕ್ತಿಪಂಥದ ಸಂಪೂರ್ಣ ಪರಂಪರೆಯನ್ನು ಒಳಗೊಳ್ಳುತ್ತವೆ, ಅದರಲ್ಲಿಯೂ ಮುಖ್ಯವಾಗಿ ವಿಷ್ಣುವಿನ ಆರಾಧನೆಯನ್ನು ಒಳಗೊಳ್ಳುತ್ತವೆ. ಶ್ರೀರಾಮಾನುಜರನ್ನು ಮುಖ್ಯ ಪಾತ್ರವನ್ನಾಗಿ ಚಿತ್ರಿಸಿದ್ದರೂ ಈ ಲೇಖನಗಳು ಭಕ್ತಿಮಾರ್ಗದ ಉಗಮವನ್ನೂ ಬೆಳವಣಿಗೆಯನ್ನೂ ತಿಳಿಸುತ್ತದೆ. ಹನ್ನೆರಡು ಜನ ಆಳ್ವಾರರುಗಳ ಹಿನ್ನೆಲೆಯನ್ನೂ, ಮನೆತನದ ವಿವರಗಳನ್ನು ಇಲ್ಲಿ ತಿಳಿಸುತ್ತಾರೆ. ಅವರಲ್ಲಿ ಒಬ್ಬ ಗೌರಾವಾನ್ವಿತ ಮಹಿಳಾ ಭಕ್ತೆ ಆಂಡಾಳ್ ಸಹ ಇದ್ದಳೆಂಬುದನ್ನು ತಿಳಿಸುತ್ತಾರೆ. ದಾಖಲಾದ ಅತ್ಯಂತ ಪ್ರಾಚೀನ ಅಂದರೆ ಕ್ರಿ.ಪೂ. ೪೩೦೦ರ ಕಾಲದಲ್ಲಿ (ದ್ವಾಪರ ಯುಗದಲ್ಲಿ) ಭಕ್ತಿಮಾರ್ಗ ಪ್ರಾರಂಭವಾದುದನ್ನು ಗುರುತಿಸಲಾಗಿದೆ. ಅದು ಎಂತಹ ಪ್ರಭಾವಯುತವಾದ ನಿರೂಪಣೆಯೆಂದರೆ, ಜ್ಞಾನಮಾರ್ಗದ ಬಗ್ಗೆ ಒಲವು, ನಿಷ್ಠೆ ಇರುವ ಉದ್ದಾಮ ಪಂಡಿತನನ್ನೂ ಭಕ್ತಿಯ ಅಮೃತದ ಕಡೆಗೆ ಸೆಳೆಯುತ್ತದೆ. ವರ್ತಮಾನ ಸಮಯದಲ್ಲಿ ನಡೆಯುತ್ತಿರುವ ಚಿಂತನೆಗಳು, ವಾದಗಳಿಗೆ ಮೂಲದ್ರವ್ಯವು ಈ ಪುಸ್ತಕದಲ್ಲಿದೆ ಎಂಬುದನ್ನು ನಾವು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಗಹನವಾದ ಅಮೂರ್ತ ತತ್ತ್ವಗಳನ್ನು ಹೇಳುವ ಸಮಯದಲ್ಲಿ ಆದರ್ಶ ಭಕ್ತನ ಬದುಕಿನ ಉದಾಹರಣೆಯನ್ನೂ ನಮ್ಮ ಮುಂದೆ ಇಡಲಾಗಿದೆ. ರಾಮಾನುಜರ ಜೀವನವೇ ಆದರ್ಶ ಭಕ್ತನ ಜ್ವಲಂತ ಉದಾಹರಣೆ ಎಂಬುದನ್ನು ಈ ಪುಸ್ತಕದಲ್ಲಿ ವಿವರಿಸಿರುವುದು ಒಂದು ವಿಶೇಷತೆ. ಶ್ರೀರಾಮಕೃಷ್ಣರು ಅನೇಕ ವೇಳೆ ಭಕ್ತ, ಭಾಗವತ ಮತ್ತು ಭಗವಂತ — ಮೂರು ಒಂದೇ ಎಂದೂ, ಅವು ಒಂದೇ ಪೂರ್ಣ ಸತ್ಯದ ಅಂಶವನ್ನು ತಿಳಿಸುತ್ತದೆ ಎಂದೂ ಹೇಳುತ್ತಿದ್ದರು. ಭಗವಂತನ ನಾಮಸ್ಮರಣೆಯ ವೈಭವವನ್ನು ಶ್ರೀರಾಮಕೃಷ್ಣರು ಮೇಲಿಂದ ಮೇಲೆ ಹೇಳುತ್ತಿದ್ದರು. ಭಕ್ತರಿಗೆ ಜಾತಿ ಎಂಬುದಿಲ್ಲವೆಂದು ಅವರು ಹೇಳಿದರು ಮತ್ತು ಆಚರಿಸಿ ತೋರಿಸಿದರು. ಶ್ರೀರಾಮಾನುಜರ ಭವ್ಯವಾದ ಮತ್ತು ಆಶ್ಚರ್ಯಕರವಾದ ಜೀವನವು ಜಾತಿಪದ್ಧತಿಯನ್ನು ಮೀರಿ ಜಾತ್ಯತೀತ ಸ್ತರಕ್ಕೇರಿದ ಶ್ರೇಷ್ಠ ಉದಾಹರಣೆ. ಇದನ್ನು ಪರಿಶುದ್ಧ ಮನಸ್ಸು ಮತ್ತು ಅಂತಃಕರಣವುಳ್ಳವರು ಮಾತ್ರ ಅರಿಯಲು ಸಾಧ್ಯ.


ಆಳ್ವಾರುಗಳ ಜೀವನವನ್ನಿಲ್ಲಿ ಸಂಕ್ಷಿಪ್ತವಾಗಿ ತಿಳಿಸಿರುತ್ತಾರೆ. ಪ್ರತಿಯೊಬ್ಬರ ಜೀವನವೂ ದೇವರಲ್ಲಿ ಸಂಪೂರ್ಣ ಶರಣಾಗತಿಯ ಉದಾಹರಣೆಯಾಗಿದೆ; ಭಗವತ್ ಸಾಕ್ಷಾತ್ಕಾರ ಹೊಂದಿದ ಭಕ್ತರ ಸಾರ್ವತ್ರಿಕ ಅನುಭವವಾಗಿದೆ. ಜ್ಞಾನ-ಭಕ್ತಿಗಳು ಅಂತಿಮವಾಗಿ ಒಂದಾಗುತ್ತವೆ ಎಂಬುದು ಶ್ರೀರಾಮಕೃಷ್ಣರ ಭಕ್ತರಿಗೆ ತಿಳಿದಿರುವ ವಿಷಯವೇ ಆಗಿದೆ. ಲೋಕಸಂಗ್ರಹ, ಕರ್ಮ, ಅಧಿಕಾರಿ, ಮೊದಲಾದ ವಿಷಯಗಳಲ್ಲಿ ಪರಿಶ್ರಮ ಇರುವವರಿಗೆ ಹಾಗೂ ಈಶಾವಾಸ್ಯೋಪನಿಷತ್ತಿನ ಪರಿಚಯ ಇರುವವರಿಗೆ ಸ್ವಾಮಿ ರಾಮಕೃಷ್ಣಾನಂದರು ಇಲ್ಲಿ ತಿಳಿಸಿರುವ ವಿಷಯಗಳು — ವಿಶೇಷವಾಗಿ ಶ್ರೀರಾಮಾನುಜರ ಜೀವನ ವಿಚಾರ — ವಿಶದವಾಗಿ ಹಾಗೂ ಜ್ಞಾನಪ್ರದವಾಗಿ ಕಂಡುಬರುತ್ತವೆ. ಶ್ರೀಶಂಕರಾಚಾರ್ಯರ ಜೀವನವನ್ನೂ ಶ್ರೀರಾಮಾನುಜರ ಜೀವನವನ್ನೂ ತುಲನೆ ಮಾಡಿ ಹೇಗೆ ಈ ಇಬ್ಬರು ಮಹಾತ್ಮರ ನಡುವೆ ಸಾಮ್ಯತೆಯಿದೆ ಎಂಬುದನ್ನು ಇಲ್ಲಿ ವಿಶದಪಡಿಸಲಾಗಿದೆ. ಅಲ್ಪತನದಿಂದ ಕೂಡಿದುದು ಯಾವುದೂ ಇಲ್ಲಿಲ್ಲ. ಯಾಮುನಾಚಾರ್ಯರ ಜೀವನದಲ್ಲಿ ಅವರು ಯುವಕರಾಗಿದ್ದಾಗ ಹೇಗೆ ತಮ್ಮ ಮೇಧಾಶಕ್ತಿಯ ಬಲದಿಂದ ರಾಜ್ಯದ ಒಡೆತನವನ್ನೂ ಸಂಪಾದಿಸಿದರು, ಮತ್ತು ಮನುಷ್ಯನ ಮನಸ್ಸಿನಲ್ಲಿರುವ ರಾಜಸಿಕ ಪ್ರವೃತ್ತಿಯು ಪ್ರಬಲವಾಗಿದ್ದು ಆಧ್ಯಾತ್ಮಿಕ ಪ್ರವೃತ್ತಿ

# 'Life of Sri Ramanuja' ಗ್ರಂಥದ ಹೊಸ ಆವೃತ್ತಿ

ಈಗ ವಿಮರ್ಶೆಗೆ ತೆಗೆದುಕೊಂಡಿರುವ ''Life of Sri Ramanuja'' ಎಂಬ ಪುಸ್ತಕವನ್ನು ಚೆನ್ನೈ ರಾಮಕೃಷ್ಣ ಮಠದವರು ಪ್ರಕಟಿಸಿದ್ದಾರೆ. ಇದರ ಲೇಖಕರು ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು. ೨೦೧೭ನೆಯ ಸಂವತ್ಸರವು ಶ್ರೀರಾಮಾನುಜರ ಸಹಸ್ರಮಾನ ವರ್ಷ. ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣ ಮಹಾಸಂಘವು, ಅದರಲ್ಲಿಯೂ ಚೆನ್ನೈ ರಾಮಕೃಷ್ಣ ಮಠವು ಶ್ರೀರಾಮಾನುಜರಿಗೆ ಅರ್ಪಿಸುತ್ತಿರುವ ಭಕ್ತಿಯ ನುಡಿನಮನ ಈ ಪುಸ್ತಕ. ಇದರ ಮೊದಲ ಆವೃತ್ತಿಯನ್ನು ೧೯೫೯ರ ಜನವರಿ ೧ರಂದು, ಶ್ರೀಮಾತೆ ಶಾರದಾದೇವಿಯವರ ಜನ್ಮದಿನೋತ್ಸವದಂದು ಪ್ರಕಟಿಸಲಾಗಿತ್ತು. ಅದು ಸ್ವಾಮಿ ರಾಮಕೃಷ್ಣಾನಂದರು ಬಂಗಾಳಿಯಲ್ಲಿ ಬರೆದ ಲೇಖನಗಳ ಇಂಗ್ಲಿಷ್ ಭಾಷಾಂತರವಾಗಿತ್ತು ಎಂಬುದನ್ನು ಓದುಗರು ನೆನಪಿಸಿಕೊಳ್ಳಬಹುದು. ಇತ್ತೀಚಿನ ೫ನೆಯ ಆವೃತ್ತಿಯನ್ನು ಓದುಗರಿಗೆ ಪರಿಚಯಿಸುವ ಮುನ್ನ ಇದರ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ತಿಳಿಯುವುದು ಸೂಕ್ತವೆನಿಸುತ್ತದೆ.

ಭಾರತದ ಧಾರ್ಮಿಕ ಮತ್ತು ತತ್ತ್ವಶಾಸ್ತ್ರದ ಪರಂಪರೆಯಲ್ಲಿ ಆಚಾರ್ಯ ರಾಮಾನುಜರು (ಕಿ.ಶ. ೧೦೧೭–೧೧೩೭) ಒಂದು ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ಬೌದ್ಧಧರ್ಮವು ಕ್ಷೀಣವಾದ ನಂತರದಲ್ಲಿ ವೇದಪ್ರಣೀತವಾದ ಬ್ರಹ್ಮತತ್ತ್ವವನ್ನು ಪ್ರತಿಪಾದಿಸಿ ಪುನರುತ್ಥಾನಗೊಳಿಸುವ ಕೆಲಸದಲ್ಲಿ ಆಚಾರ್ಯ ರಾಮಾನುಜರ ಕೊಡುಗೆ ಮಹತ್ತರವಾದುದು. ಸ್ವಾಮಿ ವಿವೇಕಾನಂದರು ತಮ್ಮ ಉಪನ್ಯಾಸಗಳಲ್ಲಿ ಶ್ರೀ ರಾಮಾನುಜಾಚಾರ್ಯರಿಗೆ ತಮ್ಮ ಗೌರವವನ್ನು ಸೂಚಿಸಿ ಅವರ ಜೀವನವನ್ನೂ, ಅವರ ತತ್ತ್ವಸಿದ್ಧಾಂತಗಳನ್ನೂ ಚರ್ಚಿಸಿದ್ದಾರೆ. ಶ್ರೀರಾಮಕೃಷ್ಣರು ಕೇಶವಚಂದ್ರ ಸೇನನಿಗೆ ಭಾರತದ ವಿವಿಧ ಮತ, ಪಂಥಗಳ ಸಮನ್ವಯವನ್ನು ಬೋಧಿಸುವ ಸಂದರ್ಭದಲ್ಲಿ ಶ್ರೀರಾಮಾನುಜರ ತತ್ತ್ವಗಳನ್ನು ತಿಳಿಸುತ್ತಾರೆ. ಶ್ರೀರಾಮಕೃಷ್ಣರು ನರೇಂದ್ರನಿಗೆ (ಮುಂದೆ ಸ್ವಾಮಿ ವಿವೇಕಾನಂದ) ಶ್ರೀರಾಮಾನುಜರ ತತ್ತ್ವಗಳನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ: ಪರಬ್ರಹ್ಮವು ಪ್ರಪಂಚ ಮತ್ತು ಸಜೀವ ವಸ್ತುಗಳಿಂದ ಕೂಡಿಕೊಂಡಿದೆ. ಬ್ರಹ್ಮ, ಪ್ರಪಂಚ ಮತ್ತು ಸಜೀವ ವಸ್ತುಗಳು ಎಲ್ಲವೂ ಸೇರಿ ಒಂದೇ ಬ್ರಹ್ಮತತ್ತ್ವವಾಗಿದೆ.

ಭಗವಂತನ ಸೇವೆಗೆ ಅರ್ಪಿತವಾದ ಆಚಾರ್ಯ ರಾಮಾನುಜರ ಸಂಕ್ಷಿಪ್ತ ಜೀವನ ಚರಿತ್ರೆ ಮತ್ತು ಅವರು ಪ್ರತಿಪಾದಿಸಿದ ತತ್ತ್ವಗಳನ್ನು ಶ್ರೀರಾಮಕೃಷ್ಣರ ನೇರ ಶಿಷ್ಯರೂ, ಭಕ್ತಿಮಾರ್ಗದಲ್ಲಿ ಅಚಲವಾದ ಶ್ರದ್ಧೆ, ನಿಷ್ಠೆಯುಳ್ಳವರೂ, ಪವಿತ್ರ ಜೀವನವನ್ನು ನಡೆಸಿದವರೂ, ಆಳವಾದ ಪಾಂಡಿತ್ಯವುಳ್ಳವರೂ ಮತ್ತು ಜನಸೇವಾನಿರತರೂ ಆಗಿದ್ದ ಸ್ವಾಮಿ ರಾಮಕೃಷ್ಣಾನಂದರೇ ರಚಿಸಿರುವುದು ಅತ್ಯಂತ ಸಮಂಜಸವಾದುದು. ಸ್ವಾಮಿ ವಿವೇಕಾನಂದರ ಆಣತಿಯಂತೆ ದಕ್ಷಿಣ ಭಾರತದಲ್ಲಿ ಪ್ರಪ್ರಥಮ ರಾಮಕೃಷ್ಣ ಮಠವನ್ನು ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಪ್ರಾರಂಭಿಸಿದ ನಂತರ ಅವರು ದಕ್ಷಿಣ ಭಾರತದ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ಆಚರಣೆಗಳತ್ತ ಆಕರ್ಷಿತರಾದರು. ಸಹಜವಾಗಿ ಭಾರತೀಯ ಆಧ್ಯಾತ್ಮಿಕ ಪರಂಪರೆಯ ಮೇಲೆ ಶ್ರೀರಾಮಾನುಜಾಚಾರ್ಯರ ಪರಿಣಾಮವನ್ನು ಅವರು ಮನಗಂಡರು, ಮತ್ತು ಈ ಆಧ್ಯಾತ್ಮಿಕ ಪರಂಪರೆಯನ್ನು ಬಂಗಾಳದ ಜನರಿಗೆ ತಿಳಿಸಿಕೊಡಬೇಕೆಂದು ಆಶಿಸಿದರು. ಏಕೆಂದರೆ ಬಂಗಾಳದ ಜನರಿಗೆ ಶ್ರೀರಾಮಾನುಜರ ಬಗ್ಗೆ ಹೆಚ್ಚಾಗಿ ತಿಳಿದಿರಲಿಲ್ಲ. ಸ್ವಾಮಿ ರಾಮಕೃಷ್ಣಾನಂದರು ಬಂಗಾಳಿ ಭಾಷೆಯಲ್ಲಿ ಲೇಖನಗಳನ್ನು ಬರೆದು ಅದನ್ನು




*Book:* **Life of Sri Ramanuja**

*Originally written in Bengali by:* **Swami Ramakrishnananda**

*Translated and edited by:* **Swami Budhananda**

*Published by:* **Adhyaksha, Sri Ramakrishna Math, Mylapore, Chennai-4**

*Price:* **Rs. 300**

'ಉದ್ಬೋಧನ' ಪತ್ರಿಕೆಯಲ್ಲಿ ಫೆಬ್ರವರಿ ೧೮೯೯ರಿಂದ ಧಾರಾವಾಹಿಯಾಗಿ ಪ್ರಕಟಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಆಗ 'ಉದ್ಬೋಧನ' ಪತ್ರಿಕೆಯ ಸಂಪಾದಕರೂ, ಶ್ರೀರಾಮಕೃಷ್ಣರ ನೇರ ಶಿಷ್ಯರೂ ಆಗಿದ್ದ ಪರಮಪೂಜ್ಯ ಸ್ವಾಮಿ ಶಾರದಾನಂದಜಿಯವರು ಪುಸ್ತಕದ ಮೊದಲ ಆವೃತ್ತಿಗೆ ಮುನ್ನುಡಿ ಬರೆದರು. ಶ್ರೀರಾಮಕೃಷ್ಣರ ನೇರ ಶಿಷ್ಯರಾಗಿದ್ದ ಸ್ವಾಮಿ ಶಿವಾನಂದರ ಶಿಷ್ಯರೂ ಚೆನ್ನೈ ಮಠದ ಅಧ್ಯಕ್ಷರೂ ಆಗಿದ್ದ ಸ್ವಾಮಿ ತಪಸ್ಯಾನಂದರು ಈ ಪುಸ್ತಕಕ್ಕೆ ಪೂರಕವಾಗಿರುವ, ಶ್ರೀರಾಮಾನುಜರನ್ನು